ಚಲ್ಲಣ, 10. ಚೌಕಜರಡಿ, ತೊಟ್ಟಿ... ಹೀಗೆ ಟ್ರಂಕಿನ ಕವಲುಗಳಿವೆ.

ಟ್ರಂಕಿಗಿರುವ ಹಲವು ಅರ್ಥಗಳಲ್ಲಿ 'ಕಾಂಡ', 'ಅಪಧಮನಿ' ಹಾಗೂ 'ಆನೆಯ ಸೊಂಡಿಲು' ವಿಶೇಷವಾಗಿ ಕಾಣಿಸುತ್ತವೆ. ಇವೆಲ್ಲವೂ ಜೀವದೊಂದಿಗೆ ಬೆಸೆದುಕೊಂಡ ಸಂಗತಿಗಳು. ತಗಡಿನದೋ ಮರದ್ದೋ ಆಗಿರುವ ಟ್ರಂಕೆನ್ನುವ ಪೆಟ್ಟಿಗೆ ಕೂಡ ನನಗೆ ಜೀವವುಳ್ಳದ್ದಾಗಿ, ಹಲವು ನೆನಪುಗಳನ್ನು ಪಿಸುಗುಡುವ ಪೆಠಾರಿಯಾಗಿ ಕಾಣಿಸುತ್ತದೆ. ಹೆಣ್ಣಿನ ತಾಳಿಕೆಯ ಗುಣ ಹಾಗೂ ಧಾರಣಶಕ್ತಿಗಳು ಈ ಪೆಟ್ಟಿಗೆಗಿದೆ ಎನ್ನಿಸುತ್ತದೆ. ಯೋಚಿಸುತ್ತಾ ಹೋದಂತೆ, ಅಮ್ಮನ ಹೊಟ್ಟೆಯೂ ಒಂದು ಟ್ರಂಕು ಎನ್ನಿಸುತ್ತದೆ. ಆದರೆ, ಅಮ್ಮನ ಗರ್ಭದ ಟ್ರಂಕು ಒಂಬತ್ತು ತಿಂಗಳಷ್ಟೇ ನಮ್ಮನ್ನು ಬಚ್ಚಿಟ್ಟುಕೊಳ್ಳುತ್ತದೆ. ಉಳಿದ ಜೀವನವಷ್ಟೂ ಅಮ್ಮನ ಮಡಿಲಲ್ಲಿ ಟ್ರಂಕಿನ ಕಾಯುವ ಪೊರೆಯುವ ಗುಣವನ್ನು ಕಾಣಬೇಕು. ಹೆತ್ತ ನಂತರವೂ ಮರಿಗಳನ್ನು ತಮ್ಮ ಹೊಟ್ಟೆಯ ಚೀಲದಲ್ಲಿ ಆತುಕೊಳ್ಳುವ ಕಾಂಗರೂಗಳದು ಬಹುದೊಡ್ಡ ಜೀವಗುಣದ ಟ್ರಂಕು.

ಗುಟ್ಟುಗಳನ್ನು ಅಡಗಿಸಿಟ್ಟುಕೊಳ್ಳುವ ಟ್ರಂಕಿನ ಸಾಧ್ಯತೆಯ ಬಗ್ಗೆ ಮಾತನಾಡುವಾಗ ಬಿ.ಕೆ. ಶಿವರಾಂ ಅವರ ಬರಹವೊಂದನ್ನು ನೆನಪಿಸಿಕೊಳ್ಳಬೇಕು. 'ಪ್ರಜಾವಾಣಿ' ಪತ್ರಿಕೆಯಲ್ಲಿ 'ಪೊಲೀಸ್ ಕಥೆಗಳು' ಎನ್ನುವ ತಮ್ಮ ಅಂಕಣದಲ್ಲಿ ಶಿವರಾಂ ಅವರು ಹಂಚಿಕೊಂಡಿದ್ದ ಪ್ರಸಂಗವಿದು.

"ಕಲಾಸಿಪಾಳ್ಯದಲ್ಲಿ ಒಬ್ಬ ಮುಸ್ಲಿಂ ವ್ಯಕ್ತಿ ಗನ್, ಸ್ಟೆನ್‌ಗನ್‌ಗಳನ್ನು ಸರಬರಾಜು ಮಾಡುತ್ತಿದ್ದಾನೆ ಎಂಬ ಮಾಹಿತಿ ಸಿಕ್ಕಿತು. ಆ ಮಾಹಿತಿ ಆಧರಿಸಿ ನಾವು ಕಲಾಸಿಪಾಳ್ಯದ ವ್ಯಕ್ತಿಯ ಮನೆಗೆ ಹೋಗಿ ಜಪ್ತಿ ಮಾಡಿದೆವು. ಸ್ವಲ್ಪ ಹೊತ್ತಿನಲ್ಲೇ ನಮಗೆ ಬಂದದ್ದು ಸುಳ್ಳು ಮಾಹಿತಿ ಎನಿಸಿತು. ಕಡು ಬಡತನದ ಕುಟುಂಬ ಅದೆನ್ನುವುದಕ್ಕೆ ಆ ಮನೆಯೇ ಸಾಕ್ಷಿಯಂತಿತ್ತು. ಅವನನ್ನು ಪ್ರಶ್ನಿಸಿದೆವು. ಸಿನಿಮಾ ಚಿತ್ರೀಕರಣಕ್ಕಾಗಿ ನಕಲಿ ಗನ್, ಪಿಸ್ತೂಲುಗಳನ್ನು ಸರಬರಾಜು ಮಾಡುವುದು ಅವನ ಕೆಲಸವಾಗಿತ್ತು. ಎಲ್ಲ ನಕಲಿ ಶಸ್ತ್ರಾಸ್ತ್ರಗಳನ್ನೂ ಬೇಸರವಾಗಲೀ ಆತಂಕವಾಗಲೀ ಇಲ್ಲದೆ ಅವನು ತೋರಿಸಿದ.

ಅದೇ ಮನೆಯಲ್ಲಿ ಹಳೆಯ ಕಾಲದ ಕಬ್ಬಿಣದ ದೊಡ್ಡ ಟ್ರಂಕ್ ಇತ್ತು. ಅದಕ್ಕೆ ಬೀಗ ಹಾಕಲಾಗಿತ್ತು. ತುಂಬಾ ಭಾರವಾಗಿದ್ದರಿಂದ ಅದರೊಳಗೆ ಏನಾದರೂ ಅಡಗಿಸಿಟ್ಟಿರಬಹುದೇ ಎಂಬ ಅನುಮಾನ ನಮಗೆ. ಅದರ ಕೀ ಕೊಡುವಂತೆ ಕೇಳಿದೆವು. ಮುಸ್ಲಿಂ ಹುಡುಗನ ವಯೋವೃದ್ಧ ತಾಯಿ ಗಲಾಟೆ ಮಾಡತೊಡಗಿದರು. 'ಕೀ ಮಾತ್ರ ಕೇಳಬೇಡಿ' ಎಂದು ಪಟ್ಟುಹಿಡಿದರು. ನಮ್ಮ ಕುತೂಹಲ ಹೆಚ್ಚಾಯಿತು. ಅದರಲ್ಲಿ ಪವಿತ್ರ ಗ್ರಂಥ ಇಟ್ಟಿರಬಹುದೇನೋ ಅಂದುಕೊಂಡೆವು. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರದೆ ಹುಡುಕಾಟ ನಡೆಸಬೇಕಾದುದು ಪೊಲೀಸರ ಧರ್ಮ. ಆದರೆ, ಅದರ ಭಾರವನ್ನು ನೋಡಿದರೆ ಅದರಲ್ಲಿ ಪವಿತ್ರ ಗ್ರಂಥ ಇದೆ ಎನ್ನಿಸುತ್ತಿರಲಿಲ್ಲ. ಆ ತಾಯಿಯ ಮಗ, ಸೊಸೆ ಮಾತ್ರ 'ಅದನ್ನೂ ತೆಗೆದು ನೋಡಲಿ ಬಿಡು' ಎಂದು ಆ ಅಜ್ಜಿಗೆ ಹೇಳುತ್ತಲೇ ಇದ್ದರು. ಅಜ್ಜಿ ಮಾತ್ರ ಮನಸ್ಸು ಸಡಿಲಿಸಲಿಲ್ಲ. ನಮ್ಮ ಅನುಮಾನ ಬಲವಾಗುತ್ತಾ ಹೋಯಿತು. ಕೀ ಕೊಡಲೇಬೇಕು ಎಂದು ಪಟ್ಟು ಹಿಡಿದೆವು. ಸುಮ್ಮನೆ ಕೊಟ್ಟುಬಿಡು ಎಂದು ಮಗ, ಸೊಸೆಯೂ ಅಜ್ಜಿಗೆ ಬುದ್ಧಿ ಹೇಳಿದರು. ಒಲ್ಲದ ಮನಸ್ಸಿನಿಂದಲೇ ಅಜ್ಜಿ ಕೀ ಕೊಟ್ಟರು. ಟ್ರಂಕ್ ತೆಗೆದು ನೋಡಿದರೆ ನಮಗೆ ಅಚ್ಚರಿ.

ಅದರಲ್ಲಿದ್ದುದು ಎರಡು ಸೆಟ್ ಅಲ್ಯುಮಿನಿಯಂ ಪಾತ್ರೆಗಳು. ಅಜ್ಜಿಯ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಮನೆಗೆಲಸ ಮಾಡಿದ ಹಣದಲ್ಲೇ ಸ್ವಲ್ಪ ಉಳಿಸಿ ತನ್ನ ಮಗಳಿಗೆ ಕೊಡಲೆಂದು ಅಲ್ಯುಮಿನಿಯಂ ಪಾತ್ರೆಗಳನ್ನು ಅವರು ಕೊಂಡುಕೊಂಡು, ಟ್ರಂಕಿನಲ್ಲಿ ಜೋಪಾನವಾಗಿ